# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಎಮ್.ವೈ.ಎಸ್–9214/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 17/10/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ರಾಷ್ಟ್ರೀಯ ಹೆದ್ದಾರಿ 66 ರಿಂದ ಆಲಂಗಾರಿಗೆ ಹೋಗುವ ಜಿಲ್ಲಾ ಪಂಚಾಯತ್ ರಸ್ತೆಯಾದ ಬಳಿಕ ರಸ್ತೆಯ ಜಾಗದಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸಿ ನಿಯಮಾನುಸಾರ ಕ್ರಮ ಜರುಗಿಸುವ ಕುರಿತು.

*****

1. ಶ್ರೀ ಶಶಿಧರ ಶೆಟ್ಟಿ, ವಕೀಲರು, ಸ್ವಸ್ತಿಕ್ ಪಾರ್ಕ್, 1–507, ಪಡುಬಿದ್ರ ಗ್ರಾಮ ಮತ್ತು ಅಂಚೆ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಈ ದೂರನ್ನು ಸಲ್ಲಿಸಿ, (1) ಶ್ರೀ ಪಂಚಾಕ್ಷರಿ ಸ್ವಾಮಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ನಡ್ಸಾಲ ಗ್ರಾಮ, ಪಡುಬಿದ್ರೆ ಅಂಚೆ, ಉಡುಪಿ ತಾಲ್ಲೂಕು ಉಡುಪಿ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ. ತನಿಖಾ ಅವಧಿಯಲ್ಲಿ (2) ಶ್ರೀ ಉಮಾಶಂಕರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಇಂಚಾರ್ಜ್ ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ. ಉಪ ವಿಭಾಗ, ಉಡುಪಿ, (3) ಶ್ರೀ ಸುನಿಲ್, ಕಿರಿಯ ಅಭಿಯಂತರರು, ಪಿ.ಆರ್.ಇ., ಉಪ ವಿಭಾಗ, ಉಡುಪಿ ಇವರನ್ನು ಸೇರಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ.

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ಸಾರಾಂಶ:-

ಉಡುಪಿ ತಾಲ್ಲೂಕಿನ ಪಡುಬಿದ್ರಿ ಗ್ರಾಮ ಪಂಚಾಯತಿಯಲ್ಲಿ ದಿನಾಂಕ 12/05/2017 ರಂದು ನಡೆದ ಸಾಮಾನ್ಯ ಸಭೆಯ ನಿರ್ಣಯ ನಂಬರ್ 3/20/17-18 ಇದರ ಪ್ರಕಾರ ಕಲ್ಪನ ಶೆಟ್ಟಿ ಕೋಂ: ನಾರಾಯಣ ಶೆಟ್ಟಿ ಇವರಿಗೆ ಸರ್ವೇ ನಂಬರ್ 57/2/57/1ಎ ಇದರಲ್ಲಿ ಕಟ್ಟಡ ವಿಸ್ತರಣೆ ಮತ್ತು ಎರಡು ಅಂತಸ್ತಿನ ಕಟ್ಟಡ ನಿರ್ಮಾಣಕ್ಕೆ ನೀಡಲಾದ ಪಂಚಾಯತ್ ಪರವಾನಿಗೆಯು ಸಂಪೂರ್ಣವಾಗಿ ಕಾನೂನಿಗೆ ವಿರುದ್ಧವಾಗಿದ್ದು, ಪ್ರಸ್ತುತ ಈ ಕಟ್ಟಡವು ಪಡುಬಿದ್ರೆ ಪೇಟೆಯಿಂದ ಅಲಂಗಾರು ಗ್ರಾಮಕ್ಕೆ ಹೋಗುವ ಜಿಲ್ಲಾ ಪಂಚಾಯತ್ ರಸ್ತೆಯ ಬದಿಯಲ್ಲಿದ್ದು ಷರತ್ತುಗಳನ್ನು ಉಲ್ಲಂಘಿಸಿ ಕಟ್ಟಡ ರಚನೆ ಮಾಡಿರುತ್ತಾರೆ.

ಜಿಲ್ಲಾ ಪಂಚಾಯತ್ ರಸ್ತೆಯಾದ ಪಡುಬಿದ್ರಿ ಅಲಂಗಾರು ರಸ್ತೆಯಿಂದ 25 ಮೀಟರ್ ಒಳಗೆಯೇ ಈ ಕಟ್ಟಡ ರಚನೆಯಾಗುತ್ತಿದೆ. S.T.P ಪಿಟ್ ರಚನೆ ಮಾಡದೆ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಪ್ರತಿಯೊಂದು ಮೂಲೆಯಲ್ಲಿ ಕನಿಷ್ಠ 4 ಅಡಿ ಅಂತರದ ಖಾಲಿ ಸ್ಥಳ ಇರಬೇಕೆಂದು ಪಡುಬಿದ್ರಿ ಪಂಚಾಯತ್ ಪರವಾನಿಗೆ ಪತ್ರದ ಷರತ್ತಿನಲ್ಲಿ ತಿಳಿಸಿದ್ದರೂ ಇದನ್ನು ಬಿಡದೇ ಈ ಕಟ್ಟಡ ನಿರ್ಮಿಸಲಾಗುತ್ತಿದೆ.

ಎದುರುದಾರರು ಕಾನೂನುಬಾಹಿರವಾಗಿ ನೀಡಿದ ಪಂಚಾಯತ್ ಪರವಾನಿಗೆಯೇ ಮೂಲಕಾರಣವಾಗಿದೆ. ಆದ್ದರಿಂದ, ಪಂಚಾಯತ್ ಅಭಿವೃದ್ದಿ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು, ಈ ಕಟ್ಟಡವನ್ನು ತೆರವುಗೊಳಿಸಿ, ಅಲಂಗಾರು-ಮಟ್ಟು ಗ್ರಾಮದ ಜಿಲ್ಲಾ ಪಂಚಾಯತ್ ರಸ್ತೆಯನ್ನು ಸರ್ಕಾರ ಘೋಷಿಸಿದ 25 ಮೀಟರ್ ಅಗಲಗೊಳಿಸಿ ಜನರಿಗೆ ಸಂಚಾರ ಯೋಗ್ಯ ರಸ್ತೆಯನ್ನಾಗಿ ಮಾಡಿಕೊಡಲು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಕೋರಿರುತ್ತಾರೆ.

3. 1ನೇ ಎದುರುದಾರರ ಆಕ್ಷೇಪಣೆ:-

ಕಲ್ಪನಾ ಶೆಟ್ಟಿ ಕೋಂ ವೈ.ಎನ್. ಶೆಟ್ಟಿರವರು ನಡ್ಸಾಲು ಗ್ರಾಮದ (ವಾಸ್ತವ್ಯೇತರ) ಸರ್ವೇ ನಂ:57/2, 57/1ಎ1 ರಲ್ಲಿ ವಾಣಿಜ್ಯ ಕಟ್ಟಡ ರಚನೆಗೆ ನೆಲ ಮತ್ತು 1, 2, 3 ಮಹಡಿ ಕಟ್ಟಡ ಪರವಾನಿಗೆ ನಂಬರ್ 59/1994-95 ದಿನಾಂಕ 16/12/1994 ರಲ್ಲಿ ಪರವಾನಿಗೆ ಪಡೆದು ನೆಲ ಮಹಡಿ ಕಟ್ಟಡ ರಚನೆ ಮಾತ್ರ ಮಾಡಿದ್ದರಿಂದ ಹಿಂದಿನ ಕಾರ್ಯದರ್ಶಿಯವರು ತೆರಿಗೆ ವಿಧಿಸಿ ಕಟ್ಟಡ ನಂಬರ್ ನೀಡಿರುತ್ತಾರೆ. 1994-95 ರಲ್ಲಿ ಕಟ್ಟಡ ಪರವಾನಿಗೆ ನೀಡುವಾಗ ಕಟ್ಟಡದ ದಕ್ಷಿಣ ಬದಿಯಿರುವ ಸ್ಥಳವು ಆಗ ಜಿಲ್ಲಾ ಪಂಚಾಯತ್ ರಸ್ತೆಯಾಗಿಲ್ಲದ್ದರಿಂದ ಮತ್ತು ಭೂ ಪರಿವರ್ತನೆ ಆದೇಶದಲ್ಲಿ ರಸ್ತೆ ಇಲ್ಲದ್ದರಿಂದ ಮತ್ತು ಭೂ ಪರಿವರ್ತನೆ ಆದೇಶದಲ್ಲಿ ಯಾವುದೇ ರಸ್ತೆ ಬಗ್ಗೆ ಷರತ್ತು ಇಲ್ಲದ್ದರಿಂದ ಆಗಿನ ಆಡಳಿತ ಮಂಡಳಿ ಕಟ್ಟಡ ಪರವಾನಿಗೆ ನೀಡಿರುತ್ತದೆ.

ಕಲ್ಪನಾ ಶೆಟ್ಟಿಯವರ ಕಟ್ಟಡದ ಭಾಗಶ: ಭಾಗವು ರಾಷ್ಟ್ರೀಯ ಹೆದ್ದಾರಿ (ಎನ್.ಎಚ್.66) ಗೆ ಭೂ ಸ್ವಾಧೀನವಾದ ನಂತರ ಉಳಿದ ಕಟ್ಟಡದ ಮೇಲೆ 1 ಮತ್ತು 2ನೇ ಮಹಡಿ ರಚನೆಗೆ ಪರವಾನಿಗೆ ಕೋರಿ ದಿನಾಂಕ : 05/05/2017 ರಂದು ಅರ್ಜಿ ಬಂದಾಗ ಪರಿಶೀಲಿಸಿ ದಿನಾಂಕ 12/05/2017 ರ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸಾಮಾನ್ಯ ಸಭೆಯ ನಡವಳಿಯಂತೆ ದಿನಾಂಕ 16/05/2017ರ ಸೌಕರ್ಯ ಸಮಿತಿಯವರು ಸ್ಥಳ ಪರಿಶೀಲಿಸಿದಾಗ ಸರ್ವೇ ನಂಬರ್:57/2, 57/1ಎ1 ರಲ್ಲಿ ಪ್ರಸ್ತುತ ಇರುವ ನೆಲ ಅಂತಸ್ತಿನ ವಿಸ್ತರಣೆಯಾಗಿ ಒಂದು ಮತ್ತು ಎರಡನೆಯ ಮಹಡಿ ಕಟ್ಟಡ ರಚಿಸಲು ನೀಲಿ ನಕ್ಷೆಯಲ್ಲಿ ಎಸ್.ಟಿ.ಪಿ ಪಿಟ್ ನಮೂದಿಸಿದ ನಂತರ ಒಂದು ಮತ್ತು ಎರಡನೆಯ ಮಹಡಿ ವಿಸ್ತರಣೆ ನಿರ್ಮಾಣಕ್ಕೆ ದಿನಾಂಕ 17/05/2017 ರಂದು ಕಟ್ಟಡ ಪರವಾನಿಗೆಯನ್ನು ನೀಡಲಾಗಿರುತ್ತದೆ.

ಪಿರ್ಯಾದುದಾರರು ಪಂಚಾಯಿತಿಗೆ ದಿನಾಂಕ: 08/06/2017 ರಂದು ದೂರು ಅರ್ಜಿ ನೀಡಿ ಸದರಿ ಕಟ್ಟಡವು ಜಿಲ್ಲಾ ಪಂಚಾಯತ್ ರಸ್ತೆ ಮಾರ್ಜಿನ್‌ನಲ್ಲಿ ಇದೆ. ಎಸ್.ಟಿ.ಪಿ ಪಿಟ್ ರಚನೆ ಮಾಡಿರುವುದಿಲ್ಲಾ ಮತ್ತು ಇನ್ನಿತರ ಆಕ್ಷೇಪ ವ್ಯಕ್ತಪಡಿಸಿ ದೂರು ಅರ್ಜಿ ನೀಡಿದನ್ನು ದಿನಾಂಕ: 08/06/2017ರ ಸಾಮಾನ್ಯ ಸಭೆಯಲ್ಲಿ ಪರಿಶೀಲಿಸಿ ಒಂದು ಮತ್ತು ಎರಡನೇ ಮಹಡಿ ಅಂತಸ್ತಿನ

ಕಟ್ಟಡ ನಿರ್ಮಾಣ ಕಾಮಗಾರಿ ಮಾಡದಂತೆ ಕಲ್ಪನಾ ಎನ್.ಶೆಟ್ಟಿಯವರಿಗೆ ತಿಳುವಳಿಕೆ ಪತ್ರ ಮೂಲಕ ದಿನಾಂಕ 16/06/2017 ರಂದು ಸೂಚಿಸಲಾಗಿರುತ್ತದೆ. ಶ್ರೀಮತಿ ಕಲ್ಪನಾ ಎನ್.ಶೆಟ್ಟಿಯವರು ತಿಳುವಳಿಕೆ ಪತ್ರಕ್ಕೆ ತಾಲ್ಲೂಕು ಪಂಚಾಯತ್ ಅಧ್ಯಕ್ಷರ ಪ್ರಾಧಿಕಾರದಿಂದ ತಡೆಯಾಜ್ಞೆ ತಂದಿರುತ್ತಾರೆ.

ನೆಲ ಮಹಡಿ ಕಟ್ಟಡದ ವಿಸ್ತರಣೆಗೆ ಪಂಚಾಯತ್‌ನಿಂದ ಪರವಾನಿಗೆ ನೀಡಿರುವುದಿಲ್ಲ. ಸದರಿ ಕಟ್ಟಡ ಪೂರ್ವ ಬದಿಯಲ್ಲಿ 1994–95 ರಲ್ಲೇ ಪಿಲ್ಲರ್ ಹಾಕಿ ಸ್ಲ್ಯಾಬ್ ರಚನೆ ಮಾಡಿರುವ ಕಟ್ಟಡವಾಗಿರುತ್ತದೆ. ದಿನಾಂಕ 01/02/1989 ರಲ್ಲಿ ವಾಣಿಜ್ಯ ಉದ್ದೇಶಕ್ಕೆ ಸದರಿ ಸ್ಥಳವು ಭೂ ಪರಿವರ್ತನೆಯಾಗಿದ್ದು, ಈ ಸಂದರ್ಭದಲ್ಲಿ ಆ ಸ್ಥಳದ ದಕ್ಷಿಣ ಬದಿಯಿರುವ ಸ್ಥಳವು ಜಿಲ್ಲಾ ಪಂಚಾಯತ್ ರಸ್ತೆಯಾಗಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

4. ಪಿರ್ಯಾದುದಾರರ ಪ್ರತ್ಯುತ್ತರ:

2015ರಲ್ಲಿ ಈ ಕಟ್ಟಡವನ್ನು ರಾಷ್ಟ್ರೀಯ ಹೆದ್ದಾರಿ ಇಲಾಖೆ ಸ್ವಾಧೀನಪಡಿಸಿ ಅಕ್ರಮವಾಗಿ ಕಟ್ಟಿದ್ದನ್ನು ಕೆಡವಿದ್ದಾರೆ. ಆದ್ದರಿಂದ, 1994–95ರಲ್ಲಿ ಈ ರಸ್ತೆ ಜಿಲ್ಲಾ ಪಂಚಾಯತ್ ರಸ್ತೆಯಾಗಿ ಇಲ್ಲದಿದ್ದರೂ ಪ್ರಸ್ತುತ ಸರಕಾರದ 2005ರ ಆದೇಶದ ಪ್ರಕಾರ ಈ ಕಟ್ಟಡವು ಭಾಗಶ: ಸುಮಾರು 12 ಮೀಟರ್ ರಸ್ತೆಯ ಜಾಗವನ್ನು ಆಕ್ರಮಿಸಿಕೊಂಡಿದ್ದು, ಇದನ್ನು ಮುಂದುವರೆಸಲು ಪರವಾನಿಗೆ ನೀಡಲು ಪಂಚಾಯತ್ ಪಿ.ಡಿ.ಓ ಗೆ ಯಾವುದೇ ಅಧಿಕಾರವಿಲ್ಲ ಎಂದು ನಮೂದಿಸಿರುತ್ತಾರೆ.

5. ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಉಡುಪಿ ರವರ ತನಿಖಾ ವರದಿ:

ಪಡುಬಿದ್ರೆ ಗ್ರಾಮ ಪಂಚಾಯತಿ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66 ರಿಂದ ಆಲಂಗಾರಿಗೆ ಹೋಗುವ ರಸ್ತೆಯು ಜಿಲ್ಲಾ ಪಂಚಾಯತ್ ರಸ್ತೆಯಾಗಿದ್ದು, ಶ್ರೀಮತಿ ಕಲ್ಪನಾ ಶೆಟ್ಟಿ ಕೋಂ ನಾರಾಯಣ ಶೆಟ್ಟಿ ಇವರಿಗೆ ಸಂಬಂಧಿಸಿದ ವಾಣಿಜ್ಯ ಕಟ್ಟಡವು ಜಿಲ್ಲಾ ಪಂಚಾಯತ್ ರಸ್ತೆಯ ಮಧ್ಯಭಾಗದಿಂದ 5 ಮೀಟರ್ (ಐದು ಮೀಟರ್) ಅಂತರದಲ್ಲಿ ನಿರ್ಮಿಸಿರುವುದು ಕಂಡುಬಂದಿರುತ್ತದೆ. ಅಲ್ಲದೇ ಸದರಿ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಉಡುಪಿಯಿಂದ ನಿರಾಕ್ಷೇಪಣಾ ಪತ್ರ ಪಡೆದುಕೊಂಡಿರುವುದು ಕಂಡುಬಂದಿರುವುದಿಲ್ಲ. ವಾಣಿಜ್ಯ ಕಟ್ಟಡದ ಪಶ್ಚಿಮ ಬದಿಯಲ್ಲಿ ಪಡುಬಿದ್ರೆ ಗ್ರಾಮ ಪಂಚಾಯತ್

ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66 ಹಾದು ಹೋಗುತ್ತಿದ್ದು, ಪ್ರಸ್ತುತ ಇರುವ ರಾಷ್ಟ್ರೀಯ ಹೆದ್ದಾರಿ 66 ಮದ್ಯಭಾಗದಿಂದ ಸುಮಾರು 21 ಮೀಟರ್ ಅಂತರದಲ್ಲಿ ವಾಣಿಜ್ಯ ಕಟ್ಟಡ ಇರುವುದು ಕಂಡುಬಂದಿರುತ್ತದೆ.

ಪಡುಬಿದ್ರೆ ಪಿ.ಡಿ.ಓ. ರವರ ವರದಿ ಅನುಸಾರ ಆಲಂಗಾರು ಜಿಲ್ಲಾ ಪಂಚಾಯತ್ ರಸ್ತೆ ಆಗುವ ಮುನ್ನವೆ ಕಲ್ಪನಾ ಶೆಟ್ಟಿಯವರಿಗೆ ನೆಲ ಮಹಡಿ ಕಟ್ಟಡ ರಚನೆಗೆ ದಿನಾಂಕ: 16/12/1994 ರಂತೆ ಅಂದಿನ ಆಡಳಿತ ಮಂಡಳಿ ಅನುಮತಿ ನೀಡಿದ ಮೇರೆಗೆ ಅಂದಿನ ಕಾರ್ಯದರ್ಶಿಯವರು ನಿಯಮಾನುಸಾರ ಲೈಸನ್ಸ್ ನೀಡಿರುವುದು ಕಂಡುಬಂದಿದ್ದರೂ ತದನಂತರದಲ್ಲಿ ರಾಷ್ಟ್ರೀಯ ಹೆದ್ದಾರಿ 66 ರಿಂದ ಆಲಂಗಾರಿಗೆ ಹೋಗುವ ಜಿಲ್ಲಾ ಪಂಚಾಯತ್ ರಸ್ತೆಯಾದ ಬಳಿಕ ನಿಯಮಾನುಸಾರ ಜಿಲ್ಲಾ ಪಂಚಾಯತ್ ರಸ್ತೆ ಮಾರ್ಜಿನ್ ವ್ಯಾಪ್ತಿಗೆ ಬರುವ ಕಟ್ಟಡದ ಭಾಗವನ್ನು ತೆರವುಗೊಳಿಸುವ ಬಗ್ಗೆ ಸಂಬಂಧಪಟ್ಟ ಇಲಾಖಾ ಅಧಿಕಾರಿಯವರು ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡುಬಂದಿರುತ್ತದೆ ಎಂದು ನಮೂದಿಸಿರುತ್ತಾರೆ.

6. 2ನೇ ಮತ್ತು 3ನೇ ಎದುರುದಾರರ ಆಕ್ಷೇಪಣೆಗಳು:

ಪಡುಬಿದ್ರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ರಾಷ್ಟ್ರೀಯ ಹೆದಾರಿ 66 ರಿಂದ ಆಲಂಗಾರಿಗೆ ಹೋಗುವ ರಸ್ತೆಯು ಜಿಲ್ಲಾ ಪಂಚಾಯತ್ ರಸ್ತೆಯಾಗಿದ್ದು, ಶ್ರೀಮತಿ ಕಲ್ಪನಾ ಶೆಟ್ಟಿ ಕೋಂ ನಾರಾಯಣ ಶೆಟ್ಟಿ ಪಡುಬಿದ್ರಿ ಇವರಿಗೆ ಸಂಬಂಧಿಸಿದ ವಾಣಿಜ್ಯ ಸಂಕೀರ್ಣದ ಕಟ್ಟಡವು ಜಿಲ್ಲಾ ಪಂಚಯತ್ ರಸ್ತೆಯ ಮಧ್ಯ ಭಾಗದಿಂದ 5 ಮೀಟರ್ (ಐದು ಮೀಟರ್) ಅಂತರದಲ್ಲಿ ನಿರ್ಮಿಸಲಾಗಿದೆ. ಸದರಿ ಕಟ್ಟಡ ನಿರ್ಮಿಸಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಯಾವುದೇ ನಿರಕ್ಷೇಪಣಾ ಪತ್ರವನ್ನು ನೀಡಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

7. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ. ಶ್ರೀಮತಿ ಕಲ್ಪನಾ ಶೆಟ್ಟಿ ಇವರು ಸರ್ವೆ ನಂ 57/2, 57/1ಎ1 ನಡ್ಸಾಲು ಗ್ರಾಮದ ಸ್ವತ್ತಿನಲ್ಲಿ ನೆಲಮಹಡಿ ವಾಣಿಜ್ಯ ಕಟ್ಟವನ್ನು 1994–95 ರಲ್ಲಿ ಕಟ್ಟಿರುತ್ತಾರೆ. ನಂತರ ರಾಷ್ಟ್ರೀಯ ಹೆದ್ದಾರಿ 66 ರಸ್ತೆ ಮಾಡುವ ವೇಳೆ ಕಟ್ಟಡದ ಭಾಗಶ: ಭಾಗವು ಭೂ ಸ್ವಾಧೀನವಾಗಿರುತ್ತದೆ. ಉಳಿದ ಭಾಗದ

ಮೇಲೆ 1 ಮತ್ತು 2ನೇ ಮಹಡಿ ರಚನೆ ಮಾಡಲು ಪರವಾನಗಿ ಕೋರಿದ್ದು 1 ಮತ್ತು 2ನೇ ಮಹಡಿ ಕಟ್ಟಲು ಪಂಚಾಯ್ತಿಯಿಂದ ದಿನಾಂಕ: 17/05/2017 ರಿಂದ 17/05/2018 ರವರೆಗೆ ನಿರ್ಮಿಸಲು ಪರವಾನಗಿ ನೀಡಿರುವುದು ಕಂಡುಬಂದಿರುತ್ತದೆ.

8. ದಿನಾಂಕ: 22/12/2005 ರ ಸರ್ಕಾರದ ಸುತ್ತೋಲೆಯಲ್ಲಿ ಜಿಲ್ಲಾ ರಸ್ತೆಯ ಮಧ್ಯ ಭಾಗದಿಂದ 25 ಮೀಟರ್ ಅಗಲದವರೆಗೆ ಯಾವುದೇ ಕಟ್ಟಡ ನಿರ್ಮಿಸಲು ಅನುಮತಿ ನೀಡಬಾರದೆಂದು ಆದೇಶವಿರುತ್ತದೆ. ಸದರಿ ಕಟ್ಟಡದ ಬದಿಗೆ ಜಿಲ್ಲಾ ಪಂಚಾಯತ್ ರಸ್ತೆ ಇರುವುದು ಕಂಡುಬಂದಿರುತ್ತದೆ. ಜಿಲ್ಲಾ ಪಂಚಾಯತ್ ರಸ್ತೆಯ ಮಧ್ಯ ಭಾಗದಿಂದ 5 ಮೀಟರ್ ಅಂತರದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಿಸಿರುವುದಾಗಿ ತನಿಖಾಧಿಕಾರಿಗಳು ತನಿಖಾ ವರದಿಯಲ್ಲಿ ನಮೂದಿಸಿರುತ್ತಾರೆ. ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವ ಪೂರ್ವದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಉಡುಪಿರವರಿಂದ ನಿರಾಕ್ಷೇಪಣ ಪತ್ರ ಪಡೆಯದಿದ್ದರೂ ನಿಯಮ ಬಾಹಿರವಾಗಿ ಪಂಚಾಯ್ತಿಯಿಂದ ಪರವಾನಗಿ ನೀಡಿರುವುದು ಕಂಡುಬಂದಿರುತ್ತದೆ. ಜಿಲ್ಲಾ ಪಂಚಾಯತ್ ರಸ್ತೆಯಿಂದ 25 ಮೀಟರ್ ಒಳಗೆ ಯಾವುದೇ ಕಟ್ಟಡ ಕಟ್ಟಬಾರದೆಂದು ಪರವಾನಗಿಯಲ್ಲಿ ಷರತ್ತು ವಿಧಿಸಿದ್ದು ಸದರಿ ಕಟ್ಟಡವನ್ನು 5 ಮೀಟರ್ ಒಳಗೇ ಕಟ್ಟಿದ್ದರೂ ಪಂಚಾಯ್ತಿಯಿಂದ ಅಗತ್ಯ ಕ್ರಮ ಜರುಗಿಸದೆ ನಿಯಮಬಾಹಿರವಾಗಿ ಪರವಾನಗಿ ನೀಡಿರುವುದು ಕಂಡುಬಂದಿರುತ್ತದೆ. ಜಿಲ್ಲಾ ಪಂಚಾಯತ್ ರಸ್ತೆ ನಿಯಮಗಳನ್ನು ಉಲ್ಲಂಘಿಸಿ ಕಟ್ಟಡ ರಚನೆ ಮಾಡಿದ್ದು ಜನರಿಗೆ ರಸ್ತೆಯಲ್ಲಿ ಯೋಗ್ಯ ಸಂಚಾರ ಮಾಡಲು ಅಡಚಣೆಯಾಗಿದ್ದು ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಲು ಪಂಚಾಯ್ತಿಯಿಂದ ಕ್ರಮ ಜರುಗಿಸದೆ ಇರುವುದು ಕಂಡುಬಂದಿರುತ್ತದೆ.

9. ರಾಷ್ಟ್ರೀಯ ಹೆದ್ದಾರಿ 66 ರಿಂದ ಆಲಂಗಾರಿಗೆ ಹೋಗುವ ಜಿಲ್ಲಾ ಪಂಚಾಯತ್ ರಸ್ತೆಯಾದ ಬಳಿಕ ರಸ್ತೆಯ ಜಾಗದಲ್ಲಿರುವ ಕಟ್ಟಡಗಳನ್ನು ತೆರವುಗೊಳಿಸಿ ನಿಯಮಾನುಸಾರ ಕ್ರಮ ಜರುಗಿಸುವ ಕುರಿತು ಅಗತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸಲು ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಎನ್. ಆನಂದ] 17/10

ಉಪಲೋಕಾಯುಕ್ತರು,

ಕರ್ನಾಟಕ ರಾಜ್ಯ, ಬೆಂಗಳೂರು.